**<u>ಅಸಲು ದಾವಾ ಸಂಖ್ಯೆ: 89/2020</u>** **ಪಿ.ಡಬ್ಲ್ಯೂ:- 1**

ದಿನಾಂಕಃ **31-05-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ದಾವಾ ಆಸ್ತಿಯನ್ನು ಮಾರಾಟಗಾರರ ತಂದೆ ಖರೀದಿ ಮಾಡಿದಂತ ಆಸ್ತಿಯಾಗಿರುತ್ತದೆ. ಮಾರಾಟಗಾರರ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ. ಮಾರಾಟಗಾರರ ತಂದೆ ದಾವಾ ಆಸ್ತಿಯನ್ನು ಸುಳ್ಳಣ್ಣರವರ ಮನೆತನದ ಹನುಮಣ್ಣ ಮತ್ತು ಭೀಮಣ್ಣರವರಿಂದ ಖರೀದಿ ಮಾಡಿದ್ದರು. ದಾವಾ ಆಸ್ತಿಯನ್ನು ನಾವು ಖರೀದಿ ಮಾಡುವ ಪೂರ್ವದಲ್ಲಿ ಮಾರಾಟಗಾರರ ತಂದೆ ಖರೀದಿ ಮಾಡಿದ ದಾವಾ ಆಸ್ತಿಯ ಪೂರ್ವಕ್ಕೆ ಚಕ್ಕುಬಂಧಿ ಏನು ಬರುತ್ತದೆ ಎಂಬ ವಿಚಾರವನ್ನು ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಯನ್ನು ನನಗೆ ನನ್ನ ತಂದೆಯವರು ಖರೀದಿ ಮಾಡಿಕೊಟ್ಟಿರುತ್ತಾರೆ. ದಾವಾ ಆಸ್ತಿಯ ಖರೀದಿಯ ಎಲ್ಲಾ ವಿಚಾರಗಳು ನನ್ನ ತಂದೆಗೆ ಗೊತ್ತು. ನನಗೆ ವೈಯಕ್ತಿಕವಾಗಿ ಯಾವುದೇ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯನ್ನು ಖರೀ ಮಾಡುವ ಸಮಯದಲ್ಲಿ ಕ್ರಯಪತ್ರ ಮತ್ತು ಚಕ್ಕುಬಂಧಿಯನ್ನು ನಮ್ಮ ತಂದೆಯವರು ಹೇಳಿ ತಯಾರಿಸಿರುತ್ತಾರೆ. ಕ್ರಯಪತ್ರಕ್ಕೆ ನಾನು, ಹನುಮಂತಪ್ಪ ಮತ್ತು ಪ್ರತಿವಾದಿ ಸಹಿಯನ್ನು ಮಾಡಿದ್ದೆವು. ನಮ್ಮ ತಂದೆಯವರು ಕ್ರಯಪತ್ರವನ್ನು ಮಾಡಿಸುವ ಸಮಯದಲ್ಲಿ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ತಿರುಗಾಡುವ ರಸ್ತೆಯನ್ನು ನಾನೇ ಬಿಡಬೇಕೆಂದು ನಮೂದು ಆಗಿದೆ ಎಂದರೆ ಸರಿಯಲ್ಲ. ಹನುಮಣ್ಣ ಮತ್ತು ಭೀಮಣ್ಣರವರು ಹನುಮಂತಪ್ಪನಿಗೆ ಮಾರಾಟ ಮಾಡಿದ ಪತ್ರದಲ್ಲಿ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಯಾವುದೇ ರಸ್ತೆ ಇಲ್ಲ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ ನಂತರ ದಾವಾ ಆಸ್ತಿಯ ಪೂರ್ವಕ್ಕೆ ನಾನೇ ರಸ್ತೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಇರುವ ರಸ್ತೆ ದಾವಾ ಆಸ್ತಿಯ ವಿಸ್ತೀರ್ಣದ ಒಳಗೆ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ 5-6 ಗುಂಟೆ ರಸ್ತೆ ಇದೆ ಎಂದರೆ ಸರಿ. ದಾವಾ ಆಸ್ತಿಯ ರಸ್ತೆಯ ಪೂರ್ವ ದಿಕ್ಕಿಗೆ ದೇವರ ಉಂಬಳಿ ಜಮೀನು ಇದ್ದು, ಅದನ್ನು

ಕಮ್ಮಾರ ಜನಾಂಗದವರು ಉಳುಮೆ ಮಾಡುತ್ತಿದ್ದಾರೆ. ದಾವಾ ಆಸ್ತಿಗೂ, ಪ್ರತಿವಾದಿಯ ಆಸ್ತಿಗೂ, ದೇವರ ಉಂಬಳಿ ಜಮೀನಿಗೂ ಓಡಾಡಲೂ ಉತ್ತರ ದಿಕ್ಕಿಗೆ ಓಣಿ ಇರುವುದೇ ಹೊರತು ಯಾವುದೇ ರಸ್ತೆ ಇಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಉತ್ತರದಿಕ್ಕಿಗೆ ಓಣಿ ಇದ್ದು, ಪೂರ್ವ ದಿಕ್ಕಿಗೆ ಬಂಡಿ ದಾರಿ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಹಳ್ಳ ಇದ್ದು, ಸದರಿ ಹಳ್ಳವು ಸಹ ದಾವಾ ಆಸ್ತಿಯ ವಿಸ್ತೀರ್ಣದ ಒಳಗೆ ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ದಾವಾ ಆಸ್ತಿಯನ್ನು ನನಗೆ ಖರೀದಿ ಮಾಡಿಕೊಡುವ ಸಮಯದಲ್ಲೇ ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿರುವ ಬಂಡಿ ದಾರಿ ಮತ್ತು ಹಳ್ಳ ದಾವಾ ಆಸ್ತಿಯ ವಿಸ್ತೀರ್ಣದ ಒಳಗೆ ಬರುತ್ತದೆ ಎಂದು ಹೇಳಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ 1 ಎಕರೆ 35 ಗುಂಟೆ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದೇವೆ ವಿನಂಹ 2 ಎಕರೆ ಜಮೀನಿನಲ್ಲಿ ಉಳುಮೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಬಂಡಿ ದಾರಿ ಮತ್ತು ಹಳ್ಳದ ಜಾಗವನ್ನು ಕಬಳಿಸುವ ಉದ್ದೇಶಿದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧೀನಕ್ಕೆ ತೊಂದರೆಯನ್ನು ಉಂಟುಮಾಡಿದ್ದಾರೆ ಎಂದು ಪೊಲೀಸರಿಗೆ ದೂರನ್ನು ನನ್ನ ಯಜಮಾನರು ನನ್ನ ಹೆಸರಿನಲ್ಲಿ ಕೊಟ್ಟಿದ್ದರು. ದೂರನ್ನು ಕೊಡುವ ಸಮಯದಲ್ಲಿ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ ಮತ್ತು ದೂರಿಗೆ ನನ್ನ ಸಹಿಯನ್ನು ಮಾಡಿರುವುದಿಲ್ಲ. ನನ್ನ ಯಜಮಾನರು ಪೊಲೀಸರಿಗೆ ಕೊಟ್ಟ ದೂರಿನಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.